ಊ) ಏಪ್ರಿಲ್ 2013ರ ಮಾಹೆಯಲ್ಲಿ ಕೇಂದ್ರ ಸರ್ಕಾದಿಂದ ಹಂಚಿಕೆ ಬಾರದ ಕಾರಣ ಎ.ಪಿ.ಎಲ್. ಪಡಿತರ ಚೀಟಿದಾರರಿಗೆ ಆಹಾರಧಾನ್ಯವನ್ನು ವಿತರಿಸಿರುವುದಿಲ್ಲ. ಜುಲೈ 2013ರ ಮಾಹೆಯಲ್ಲಿ ಕೇಂದ್ರ ಸರ್ಕಾರದಿಂದ ಹಂಚಿಕೆ ಬಂದಿತ್ತಾದರೂ ಸದರಿ ಮಾಹೆಯಲ್ಲಿ ಅನ್ನಭಾಗ್ಯ ಯೋಜನೆಯನ್ನು ಜಾರಿಗೆ ತಂದ ಕಾರಣ ಎ.ಪಿ.ಎಲ್. ಪಡಿತರ ಧಾನ್ಯಗಳನ್ನು ಅನ್ನಭಾಗ್ಯ ಯೋಜನೆಗೆ ಸರಿದೂಗಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಎ.ಪಿ.ಎಲ್. ಪಡಿತರ ಚೀಟಿದಾರರಿಗೆ ಏಪ್ರಿಲ್ 2013ರ ಮಾಹೆಯಿಂದ ಅಕ್ಕಿ ಗೋಧಿ ವಿತರಣೆಯನ್ನು ಸ್ಥಗಿತಗೊಳಿಸಲಾಗಿದೆ.

ಪರಿಶಿಷ್ಟ ಜಾತಿ/ಪಂಗಡಗಳ ಜನಾಂಗದವರಿಗೆ ಹುದ್ದೆಗಳ ಭರ್ತಿ

491(294); ಶ್ರೀ. ಗೋವಿಂದ ಎಂ. ಕಾರಜೋಳ (ಮುಧೋಳ)

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ/ ಪಂಗಡಗಳ ಜನಾಂಗದವರ ಹುದ್ದೆಗಳ ನೇಮಕಾತಿಯಲ್ಲಿ ಮೀಸಲಾದ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಜ್ಯದಲ್ಲಿ ಪರಿಶಿಷ್ಟ ಜಾತಿ/ವರ್ಗಗಳ ಜನಾಂಗದವರಿಗೆ ಮೀಸಲಾದ ಹುದ್ದೆಗಳ ಸಂಖ್ಯೆ ಎಷ್ಟು; ಇದುವರೆವಿಗೂ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ; ಭರ್ತಿ ಮಾಡದೇ ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಹೌದು.

ಆ) ರಾಜ್ಯದ ವಿವಿಧ ಇಲಾಖೆಗಳು/ ನಿಗಮಗಳು/ ಮಂಡಳಿಗಳು/ ವಿಶ್ವ ವಿದ್ಯಾನಿಲಯಗಳು ಸರ್ಕಾರಿ ಸ್ವಾಯತ್ತ ಸಂಸ್ಥೆಗಳಲ್ಲಿ 2001-2002ನೇ ಸಾಲಿನಲ್ಲಿದ್ದಂತೆ ಗುರುತಿಸಲಾದ ಬ್ಯಾಕಾಲಾಗ್ ಹುದ್ದೆಗಳು, ಭರ್ತಿ ಮಾಡಿದ ಹಾಗೂ ಭರ್ತಿ ಮಾಡಲು ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ವಿವರ.

ವಿವರ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು
ಒಟ್ಟು ಗುರುತಿಸಲಾದ ಬ್ಯಾಕ್‌ಲಾಗ್ ಹುದ್ದೆಗಳು	14625	4490	19115
ಭರ್ತಿ ಮಾಡಲಾಗಿರುವ ಬ್ಯಾಕ್‌ಲಾಗ್ ಹುದ್ದೆಗಳು	12149	3456	15605
ಭರ್ತಿ ಮಾಡಲು ಬಾಕಿ ಇರುವ ಹುದ್ದೆಗಳು	2476	1034	3510
ಭವಿಷ್ಯವರ್ತಿಯಾಗಿ ಭರ್ತಿ ಮಾಡಬೇಕಾದ ಹುದ್ದೆಗಳು (ನಿವೃತ್ತಿ ಮತ್ತು ಇತರೆ ಕಾರಣಗಳಿಂದ ಉದ್ಭವವಾಗುವ ಹುದ್ದೆಗಳಿಗೆ)	1618	637	2255
ಭರ್ತಿಯಿಂದ ವಿನಾಯಿತಿ ನೀಡಲಾದ ಹುದ್ದೆಗಳು (ಆರ್ಥಿಕ ನಷ್ಟ, ರೋಗಗ್ರಸ್ತ, ಮುಚ್ಚಲ್ಪಟ್ಟ ಕಾರಣಗಳಿಂದಾಗಿ)	166	72	238
ಪ್ರಕಟಣೆ ಹೊರಡಿಸಬೇಕಾದ ಹುದ್ದೆಗಳು	692	325	1017
1 ಇವುಗಳಲ್ಲಿ ಈಗಾಗಲೇ ಪ್ರಕಟಣೆ ಹೊರಡಿಸಲಾದ ಹುದ್ದೆಗಳು	338	145	483
2. ಪ್ರಕಟಣೆ ಹೊರಡಿಸಲು ಬಾಕಿ ಇರುವ ಹುದ್ದೆಗಳು	354	180	534